doc-543
T-P-2

Reg No B G 155 11 — 9 —72

In State First GoldenJubilee Celebrated Paper 'Satyavadi' daily, Mysore 4

56th Year of Publication

★

News, Views, Dharmic Moral Ethical Matters

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಸೇರವೇರಿಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಶರಾವತಿ ಪ್ರಕರಣದ ವಿಚಾರಣೆಗೆ ಈ ಕೂಡಲೇ ಆಜ್ಞೆ ಆಗಬೇಕು

ಮಳೆ ದೇವರ ತೃಪ್ತಿಗೆ

ಮಳೆಯ ದೇವರ ತೃಪ್ತಿಗಾಗಿ ಹುಬ್ಬಳ್ಳಿಯಲ್ಲಿ ಮೊನ್ನೆ ಅನ್ನಪೂರ್ಣಾ ದೇವಿಯ ಪೂಜೆಯ ಅನಂತರ ಸಾಮೂಹಿಕ ಅನ್ನದಾನ ನಡೆಯಿತು. ವರ್ತಕರು ಇದನ್ನು ನಡೆಸಿದರು. ಭೋಜನಾನಂತರ ಆಕಾಶದಲ್ಲಿ ಮೋಡಗಳು ಕಾಣಿಸಿಕೊಂಡು, ಸಿಡಿಲು ಗುಡುಗು ಸಮೇತ ಮಳೆ ಹನಿ ಬೀಳುವುದಕ್ಕೆ ಆರಂಭವಾಯಿತು ಇನ್ನೂ ಕೆಲ ತಾಲ್ಲೂಗಳಲ್ಲಿ ಸಾಮೂಹಿಕ ಅನ್ನದಾನ ನಡೆಯಲೇಬೇಕಾಗಿದೆ.

★

ಗಂಜಿ ಕೇಂದ್ರಕ್ಕೆ ಮನವಿ

ಕಲ್ಯಾಣ ದುರ್ಗ ತಾಲ್ಲೂಕಿನ ಪ್ರತಿ ಗ್ರಾಮದಲ್ಲಿ ಗಂಜಿ ಕೇಂದ್ರ ಸ್ಥಾಪಿಸುವಂತೆ ಮನವಿ ಪತ್ರವನ್ನು ಮುಖ್ಯ ಮಂತ್ರಿಗಳಿಗೆ ವಿಧಾನ ಸಭೆ ಸದಸ್ಯ ಶ್ರೀ ಲಕ್ಷ್ಮೀದೇವಿ ಅರ್ಪಿಸಿದರು.

★

ಭಂಗಾರ ವಶ

ತಿರುಪತಿಯಿಂದ ಬಂದಿರುವ ವರದಿ ಪ್ರಕಾರ ರಾಣಿಗುಂಟದಲ್ಲಿ ಒಬ್ಬ ಪ್ರಯಾಣಿಕನಿಂದ ಅಬ್ಕಾರಿ ಇಲಾಖೆಯವರು 500 ತೊಲಾ ಭಂಗಾರ ವಶಪಡಿಸಿಕೊಂಡರು.

★

ಕೇಂದ್ರದಿಂದ ಅಂದಾಜು

ಅನಾವೃಷ್ಟಿಪೀಡಿತ ಗುಲ್ಬರ್ಗಾ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ ಈ ತಿಂಗಳು 12 ಮತ್ತು 13, 14 ರಂದು ಪರಿಹಾರಕುರಿತು ಕೇಂದ್ರ ಅಧ್ಯಯನ ತಂಡ ಅಂದಾಜು ಮಾಡುವುದೆಂದು ಬೆಂಗಳೂರು ವಾರ್ತೆ.

★

ಭೂ ಪರಿಮಿತಿ

ಭೂ ಪರಿಮಿತಿ ಉತ್ಪಾದನೆಗಳಿಗೆ ಅಡ್ಡಿ ಆಗದಂತೆ ಇರಬೇಕೆಂದು ಲೋಕೋಪಯೋಗಿ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ರಾಯಚೂರಿನಲ್ಲಿ ತಿಳಿಸಿದರು.

॥ ಶ್ರೀ ॥

ಭಗವಂತನ ಕೃಪೆಯಿಂದ " ಸತ್ಯವಾದಿ " ಗೆ 56 ನೇ ವರ್ಷ ಪ್ರಾರಂಭವಾಗಿದೆ

ನೂರು ಮಂದಿ ಅಭ್ಯರ್ಥಿಗಳು

ಮುಂದಿನ ತಿಂಗಳು 8 ನೇ ತಾ|| ಮುಂಗಳೂರು ಪೌರಸಭೆ ಚುನಾವಣೆ ನಡೆಯುವುದು 35 ಸ್ಥಾನಗಳಿಗೆ ಚುನಾವಣೆ. 100 ಮಂದಿ ಅಭ್ಯರ್ಥಿಗಳು ಇರುವರು.

★

ನಿರಾಕರಣೆ

ಭಾರತ ಕಾರ್ಮಿಕ ಮಂತ್ರಿ ಶ್ರೀ ಖಾಡಿಲ್ಕರರು ಮತ್ತು ತಮಿಳುನಾಡು ಮುಖ್ಯಮಂತ್ರಿ ಶ್ರೀ ಕರುಣಾನಿಧಿಯವರು ಮುಷ್ಕರದಲ್ಲಿ ಮಧ್ಯಸ್ಥಿಕೆ ವಹಿಸುವುದಾಗಿ ತಿಳಿಸಿದ್ದನ್ನು ರೈಲ್ವೆ ಮಂತ್ರಿ ಪೈರವರು ತಿರಸ್ಕರಿಸಿದರು. ಯಾರ ಮಧ್ಯಸ್ಥಿಕೆ ಅವಶ್ಯಕ ಇಲ್ಲ, ಇದು ರೈಲ್ವೆ ಆಡಳಿತ ಮತ್ತು ಅದರ ನೌಕರರ ವ್ಯವಸ್ಥೆಗೆ ಸೇರಿದುದು ಎಂದು ಅವರು ತಿಳಿಸಿದರು.

★ ಮೈಸೂರಿನಲ್ಲಿ ಗೂಡ್ಸ್ ಓಡಾಟದಲ್ಲಿ ಶೇಕಡ 50 ರಷ್ಟು ಉತ್ತಮ ಕಂಡಿರುವುದಾಗಿ ಬೆಂಗಳೂರು ವಾರ್ತೆ.

ತೀವ್ರ ಬದಲಾವಣೆ ಯೋಜನೆ

ಈಗಿನ ಶಿಕ್ಷಣ ಯೋಜನೆಯಲ್ಲಿ ತೀವ್ರ ಬದಲಾವಣೆ ಮಾಡಲು ತಾವು ಯೋಜಿಸಿರುವುದಾಗಿ ಶಿಕ್ಷಣ ಮಂತ್ರಿ ಶ್ರೀ ಬದ್ರೀನಾರಾಯಣರವರು ಶಿವಮೊಗ್ಗದಲ್ಲಿ ತಿಳಿಸಿದರು.

★

ಭಾರಿ ದಾಸ್ತಾನು ವಶ

ರಸಾಯನಿಕ ಗೊಬ್ಬರಗಳ ತಿಪ್ಪೋಗಳ ಮೇಲೆ ದಾಳಿ ಮಾಡಿ ಭಾರಿ ದಾಸ್ತಾನು ವಶಪಡಿಸಿಕೊಳ್ಳಲಾಯಿತೆಂದು ದಾವಣಗೆರೆ ವಾರ್ತೆ ತಿಳಿಸುತ್ತದೆ.

★

ಸೇನೆಗಳು ಜಾಗ್ರತದಲ್ಲಿ

ಇಸ್ರೇಲ್ ಸೇನೆಗಳು ತೀವ್ರ ಜಾಗ್ರತಾಸ್ಥಿತಿಯಲ್ಲಿರುವುದಾಗಿ ಟೆಲ್ ಅವೀವ್ ವರದಿಯೊಂದು ತಿಳಿಸುತ್ತದೆ

★

ಶರಾವತಿ ಬಗ್ಗೆ ಕೊ. ಮಲ್ಲಪ್ಪ

ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ರಾಜ್ಯದ ಆಡಳಿತ ಕಾಂಗ್ರೆಸ್ ಪಕ್ಷದ ಹಿರಿಯ ನಾಯಕರು ಆದ ಶ್ರೀ ಕೊಲ್ಲೂರು ಮಲ್ಲಪ್ಪನವರು ಬೆಂಗಳೂರಿನಲ್ಲಿ ನಿನ್ನೆ ಬೆಂಗಳೂರಿನಲ್ಲಿ ಹೇಳಿಕೆಯಿತ್ತ್ತು, ಶರಾವತಿ ಪ್ರಕರಣದ ಬಗೆಗೆ ನ್ಯಾಯಾಂಗ ವಿಚಾರಣೆ ನಡೆಸುವುದರಲ್ಲಿ ರಾಜ್ಯ ಸರ್ಕಾರ ತಡವನ್ನು ಮಾಡುತ್ತಿರುವ ಕುರಿತು ಅಕ್ಷೇಪಿಸಿ, ಇನ್ನು ತಡವನ್ನು ಮಾಡದೆ ಈ ಕೂಡಲೇ ವಿಚಾರಣೆಗೆ ಆಜ್ಞೆ ಮಾಡಬೇಕೆಂದು ಒತ್ತಾಯ ಮಾಡಿದರು.

●

ಕೆಂಗಲ್‌ರವರಿಂದ ಧ್ಯಾನ

ತುಮಕೂರಿನ ಬಹಿರಂಗ ಸಭೆಯಲ್ಲಿ ಶ್ರೀ ಕೆ. ಹನುಮಂತಯ್ಯನವರು ಭಾಷಣ ಮಾಡುತ್ತಾ, ಇಪ್ಪತ್ತೊಂದು ದಿವಸಗಳು ತಾವು ಧ್ಯಾನದಲ್ಲಿ ನಿರತರಾಗಬೇಕೆಂಬ ಉದ್ದೇಶವನ್ನು ವ್ಯಕ್ತಪಡಿಸಿದರು. ಕಾಂಗ್ರೆಸ್‌ನ ಯಾವ ಶಾಸಕನಾಗಲೀ ಮಂತ್ರಿ ಆಗಲಿ ಕುಡುಕನಾಗಿರಬಾರದೆಂದು ಅವರು ತಿಳಿಸಿದರು.

★ ಮಳೆಹಾನಿ ಕಾರಣ ಶಿವಮೊಗ್ಗ ಜಿಲ್ಲೆಯಲ್ಲಿ ಅರ್ಧ ಲಕ್ಷ ಎಕರೆ ಭೂಮಿಗೆ ಮೇಲ್ಪಟ್ಟು ಹಾನಿಯೊದಗಿದೆ.

★ ಶ್ರೀ ಕೆಂಗಲ್ ಹನುಮಂತಯ್ಯನವರ ಮೇಲಿನ ತಿಸ್ತುಭಂಗದ ವ್ಯವಹಾರ ಮುಗಿದ ಘಟ್ಟವೆಂದು ಶ್ರೀ ಕೊಲ್ಲೂರು ಮಲ್ಲಪ್ಪನವರು ಬೆಂಗಳೂರಿನಲ್ಲಿ ತಿಳಿಸಿದರು.

★ ಒರಿಸ್ಸಾದ ಕರಾವಳಿ ಭಾಗಗಳು ಭಾರಿಯಾದ ಬಿರುಗಾಳಿ ಹಿಡಿತದಲ್ಲಿ ಸಿಕ್ಕಿಕೊಂಡಿದೆ.

★ ನವ ದೆಹಲಿಯ ಟ್ಯಾಂಕ್ ರಸ್ತೆ ಪೋಲೀಸ್ ಠಾಣೆ ಮೇಲೆ ದಾಳಿ ಮಾಡಿದ ಗುಂಪನ್ನು ಚದುರಿಸಲು ಪೋಲೀಸರು ಅಶ್ರುವಾಯುವನ್ನು ಪ್ರಯೋಗಿಸಿದರು.

ಗೀತಾಚಾರ್ಯ ಶ್ರೀ ಕೃಷ್ಣನ ಸಂದೇಶ

★

ಅನ್ನದಿಂದ ಪ್ರಾಣಿಗಳು ಹುಟ್ಟುತ್ತವೆ ; ಮಳೆಯಿಂದ ಅನ್ನ (ಧಾನ್ಯ) ಹುಟ್ಟುತ್ತದೆ ; ಯಜ್ಞದಿಂದ ಮಳೆಯುಂಟಾಗುತ್ತದೆ; ಯಜ್ಞವು ಕರ್ಮದಿಂದ ನಡೆಯುತ್ತದೆ

ಎಂದಿಗೂ ಆಲಸ್ಯವಿಲ್ಲದೆ ಯಾರು ತಮ್ಮ ತಮ್ಮ ಕೆಲಸಗಳನ್ನು ಮಾಡುತ್ತಾರೋ ಅವರೇ ನನಗೆ ಅಸ್ತಂಭಾಗುತ್ತಾರೆ.

ಒಳ್ಳೆಯವರನ್ನು ಕಾಪಾಡುವದಕ್ಕೂ ಕೆಟ್ಟವರನ್ನು ಹಾಳುಮಾಡುವದಕ್ಕೂ ಧರ ವನ್ನು ನೆಲೆಗೊಳಿಸುವದಕ್ಕೂ ಪ್ರತಿ ಯುಗದಲ್ಲೂ ಹುಟ್ಟುತ್ತೇನೆ.

ನಾನು ನೀರಿನಲ್ಲಿ ರಸ, ಸೂರ್ಯ ಚಂದ್ರರಲ್ಲಿ ಪ್ರಭೆ, ವೇದಗಳಲ್ಲಿ ಓಂಕಾರ, ಆಕಾಶದಲ್ಲಿ ಸದ್ದು, ಪುರುಷರಲ್ಲಿ ಉದ್ಯೋಗ, ಭೂಮಿಯಲ್ಲಿ ವಾಸನೆ, ಅಗ್ನಿಯಲ್ಲಿ ಬೆಳಕು, ಪ್ರಾಣಿಗಳಲ್ಲಿ ಬದುಕುವ ಶಕ್ತಿ, ಯತಿಗಳಲ್ಲಿ ತಪಸ್ಸು, ಚರಾಚರಗಳಲ್ಲಿ ಬೀಜ, ಬುದ್ಧಿವಂತರಲ್ಲಿ ವಿವೇಕ, ಆತ್ಮಾಭಿಮಾನಿಗಳಲ್ಲಿ ಆತ್ಮಶಕ್ತಿಯಾಗಿ ನೆಲೆಸಿರುವೆ.

ಎಲ್ಲಾ ಪ್ರಾಣಿಗಳನ್ನು ಒಂದೇ ರೀತಿ ಕಾಣು : ನನ್ನದು ಎಂಬ ಅಭಿಮಾನ ಬಿಡು; ಯಾವುದರಲ್ಲೂ ಅತಿ ಮನುತೆಯನ್ನಿಡದೆ ಮನಸ್ಸನ್ನು ಬಿಗ ಹಿಡಿ ; ನನ್ನಲ್ಲಿ ಮನಸ್ಸಿಡು ; ನನ್ನಲ್ಲಿ ಪ್ರೇಮವುಳ್ಳವನಾಗು ; ನನ್ನನ್ನು ಪೂಜಿಸು, ನನಗೆ ಎರಗು, ನನ್ನನ್ನೇ ಹೊಂದುತ್ತೀ.

ತಪಸ್ಸು, ಶುಚಿತ್ವ ಇತ್ಯಾದಿ ಬ್ರಾಹ್ಮಣರ ಕರ್ಮ, ಸಾಮರ್ಥ್ಯ, ಹೋರಾಟ ಕ್ಷತ್ರಿಯರ ಕರ್ಮ, ವ್ಯವಸಾಯ, ವಾಣಿಜ್ಯ, ಪಶುಪಾಲನೆ ವೈಶ್ಯರ ವೃತ್ತಿ, ಸೇವೆಯೇ ಶೂದ್ರರಿಗೆ ತಕ್ಕ ಕೆಲಸ

ಸಂಸಾರವೆಂಬುದು ಮರ ; ಮೇಲೆ ಇರುವ ಬೇರು ಸಗುಣ ಬ್ರಹ್ಮ, ಕೆಳಗಿರುವ ಕೊಂಬೆಗಳೇ ಜೀವರಾಶಿ ಆತ್ಮವನ್ನು ಮರೆಮಾಡಿ ಸಂಸಾರವನ್ನು ಕಾಪಾಡುವ ಕರ್ಮ ಕಾಂಡವ ವಾಕ್ಯಗಳೇ ಎಲೆಗಳು, ಇದನ್ನು ಅರಿತವನೇ ತಿಳಿದವನೆನಿಸುತ್ತಾನೆ.

ರಸ ಸ್ವಭಾವದ ಚಂದ್ರನಾಗಿ ಸಸ್ಯಗಳನ್ನು ಬಲಿಸುವವನು ನಾನು.

ಫಲವನ್ನು ಬಯಸದೆ ಈಶ್ವರನಿಗೆ ಪ್ರೀತಿಯಾಗಲೆಂದು ನಿನ್ನ ಕೆಲಸದಲ್ಲಿ ಮಗ್ನನಾಗು.

ಬಯಕೆ, ಹಗೆತನ, ಸುಖ ದುಃಖ, ದೇಹೇಂದ್ರಿಯಗಳ ಗುಂಪು– ಇವುಗಳನ್ನು ಬಿಗ ಹಿಡಿಯುವ ಪ್ರಯತ್ನ, ಇವೂ ಇವುಗಳಿಂದಾದವುಗಳೂ ಹೊಲಗಳು ; ಒಬ್ಬನೇ ಸೂರ್ಯ ಹೇಗೆ ಈ ಎಲ್ಲಾ ಲೋಕಗಳನ್ನೂ ಬೆಳಗುತ್ತಾನೋ ಹಾಗೆ ಹೊಲದ ತಿಳಿವು ಗಾರನು ಹೊಲಗಳನ್ನೆಲ್ಲಾ ಬೆಳಗುತ್ತಾನೆ. (ಕೃ. ಸಂ)

ವುಡ್‌ಲ್ಯಾಂಡ್ 8 9 72 ರಂದ ಅನೋಘ ಪ್ರಾರಂಭ

ಫಿಲಂಯುಗ ಅರ್ಪಿಸುವ

ಆಂಖೊ ಆಂಖೊ ಮೆ

ಹಿಂದಿ ಈಸ್ಟ್‌ಮನ್ ಕಲರ್

ಪಾತ್ರ : ರಾಖಿ, ರಾಜೇಶ್ ರೋಷ್ ಮತ್ತು ಪ್ರಾಣ್

ಬೆಳಗಿನ ಪ್ರದರ್ಶನ 10-30 ಕ್ಕೆ ತೀಸ್ರಿ ಮಂಜಿಲ್

ಅಪೆರಾ 2 ನೇ ವಾರ

— ಅತ್ಯಮೋಘ ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ —

ಬುಡ್ಡಾ ಮಿಲ್ ಗಯಾ

ನಟವರ್ಗ— ನವೀನ್ ನಿಶ್ಚಲ್, ಅರ್ಚನಾ, ಸೋನಿಯಾ ಸಹಾನಿ
ಓಂ ಪ್ರಕಾಶ್, ಲಲಿತಾ ಪವಾರ್
ಪ್ರತಿ ದಿನ 3 ಪ್ರದರ್ಶನಗಳು

"ಮಾನವನು ಕೀಳು ಸೃಷ್ಟಿಯ ಧಣಿ, ಶ್ರಿಷ್ಠನೆನ್ನುವುದು ಸೊಕ್ಕಿನ' ಕಲ್ಪನೆ ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

★

ಅನೆ-ಹುಡುಗ

SHAKTI

SUDHA

A Superb Tonic

ಅಖಿಲಭಾರತದಲ್ಲಿ ಕೂಡಲೇ
ಗೋವಧೆ ನಿಷೇಧವಾಗಲಿ

Potect the Cow

Help The Gorakshana

— Humanitarian Propoganda Monthly ....

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharanirata M S Krishna Rao (Propretor) at the Satyavadi Press Chamarajapuram Mysore